ಅನಾಥಾಶ್ರಮಗಳು ನಡೆಸುವ ವಿದ್ಯಾಕೇಂದ್ರಗಳು ಸೇರಿದಂತೆ ಗ್ರಾಮೀಣ ಭಾಗದ ಮಕ್ಕಳ ಸ್ಥಿತಿಗತಿ ಬಗ್ಗೆ ದೃಷ್ಟಿ ಹಾಯಿಸಿದೆ. ಸರ್ಕಾರದ ನೆರವಿನ ಹೊರತಾಗಿ ಮಕ್ಕಳಿಗೆ ಅತ್ಯಗತ್ಯವಾದ ಸಾಮಗ್ರಿಗಳ ಪೂರೈಕೆ ಮಾಡಿಕೊಂಡು ಬರುತ್ತಿದೆ. ನಾಡಿನ ಮೂಲೆ ಮೂಲೆಯ ಗ್ರಾಮೀಣ ಶಾಲೆಗಳಿಗೆ ಭೇಟಿ ನೀಡಿ, ಅಲ್ಲಿನ ಸಮಸ್ಯೆಗಳನ್ನು ನಿವಾರಿಸಲು ಪ್ರಾಮಾಣಿಕ ಪ್ರಯತ್ನ ನಡೆಸುತ್ತಿದೆ. ಶಾಲೆ, ಶೌಚಾಲಯ, ಲೈಬ್ರರಿ ಹಾಗೂ ಕಂಪ್ಯೂಟರ್ ಲ್ಯಾಬ್ ನಿರ್ಮಾಣದಂತಹ ಕಾರ್ಯಗಳನ್ನು ಹಲವಾರು ಶಾಲೆಗಳಲ್ಲಿ ಕೈಗೊಂಡಿದೆ.

ಹುಣಸೂರಿನ ಬಿಇಒ ಕಚೇರಿಯಲ್ಲಿ ಅಂಗವಿಕಲ ಮಕ್ಕಳಿಗಾಗಿಯೇ ಫಿಸಿಯೊಥೆರಪಿ ಕೇಂದ್ರವಿದೆ. ಸುತ್ತಮುತ್ತಲಿನ ಹಳ್ಳಿಯ ಅಂಗವಿಕಲ ಮಕ್ಕಳು ಅಲ್ಲಿಗೆ ಬಂದು ಫಿಸಿಯೊಥೆರಪಿಯಲ್ಲಿ ಪಾಲ್ಗೊಳ್ಳುತ್ತಾರೆ. ಆದರೆ ಮಕ್ಕಳಿಗೆ ಕಚೇರಿಯಲ್ಲಿ ಶೌಚಾಲಯ ಇಲ್ಲದಿರುವುದು ಸಮಸ್ಯೆಯಾಗಿ ಪರಿಣಮಿಸಿತ್ತು. ಇದು ಗಮನಕ್ಕೆ ಬಂದ ಕೆಲವೇ ದಿನಗಳಲ್ಲಿ, 'ಅವಿರತ' ಪ್ರಯತ್ನದಿಂದ ಅಲ್ಲಿ ಶೌಚಾಲಯ ತಲೆಎತ್ತಿತು.

2009ರಲ್ಲಿ ಎದುರಾದ ಪ್ರವಾಹದಿಂದ ಗಂಗಾವತಿ ಭಾಗದಲ್ಲಿ ಹಲವು ಸಮಸ್ಯೆಗಳು ಉಂಟಾಗಿದ್ದವು. ವಿಶೇಷವಾಗಿ ಗಂಗಾವತಿಯ ಶಾಲಿಗನೂರು ಎಂಬ ಗ್ರಾಮವು ಪ್ರವಾಹದಲ್ಲಿ ಮುಳುಗಿತ್ತು. ಸರ್ಕಾರ ಆ ಗ್ರಾಮವನ್ನು ಅಲ್ಲಿಂದ ಬೇರೆ ಕಡೆಗೆ ಸ್ಥಳಾಂತರ ಮಾಡಿತ್ತು. ಬೇರೆ ಬೇರೆ ಸಂಘ ಸಂಸ್ಥೆಗಳು ನಿರಾಶ್ರಿತರಿಗೆ ಮನೆಗಳನ್ನು ಕಟ್ಟಿಸಿಕೊಟ್ಟಿದ್ದವು. ಆದರೆ ಅಲ್ಲಿ ಶಾಲೆ ನಿರ್ಮಾಣಕ್ಕೆ ಯಾರೂ ಮುಂದಾಗಿರಲಿಲ್ಲ. ಈ ಬಗ್ಗೆ ತಿಳಿದುಕೊಂಡ ತಂಡವು ಹೊಸದಾಗಿ ಶಾಲೆಯನ್ನು ನಿರ್ಮಿಸಿಕೊಟ್ಟಿದೆ.

ಪ್ರತಿವರ್ಷ ಏಪ್ರಿಲ್‌ನಲ್ಲಿ 'ಶ್ರೀಕೃಷ್ಣ ಸಂಧಾನ' ನಾಟಕ ಆಯೋಜಿಸುವ ತಂಡ, ನಾಟಕವನ್ನು ಮಕ್ಕಳ ನೋಟ್‌ಬುಕ್ಸ್ ವಿತರಣೆಗೆ ಬೇಕಾದ ದೇಣಿಗೆ ಸಂಗ್ರಹಿಸುವ ಮೊದಲ ಹಂತವಾಗಿ ಭಾವಿಸಿದೆ. ನಾಟಕದಲ್ಲಿ ನಟಿಸುವ ಪಾತ್ರಧಾರಿಗಳೂ ಇದೇ ತಂಡದ ಸದಸ್ಯರಾಗಿದ್ದಾರೆ. ನಾಟಕಕ್ಕೆ ತಗಲುವ ಖರ್ಚು ವೆಚ್ಚವನ್ನೆಲ್ಲ ಸಕ್ರಿಯ ಸದಸ್ಯರೇ ಭರಿಸುತ್ತಾರೆ.



## 60-70 ಲಕ್ಷ ರೂ ಅವಶ್ಯ

ಮಕ್ಕಳಿಗೆ ನೋಟ್‌ಬುಕ್ ವಿತರಿಸುವ ಕಾರ್ಯವನ್ನು ನಿರ್ವಹಿಸಿರುವ ತಂಡಕ್ಕೆ, ಆ ಸಲುವಾಗಿ ವಾರ್ಷಿಕ 60 ಲಕ್ಷದಿಂದ 70 ಲಕ್ಷ ರೂಪಾಯಿ ಖರ್ಚಾಗುತ್ತದೆ. ಈ ಬಗ್ಗೆ ಮಾಹಿತಿ ನೀಡಿದ ತಂಡದ ಸದಸ್ಯರೊಬ್ಬರು, 'ಈ ವರ್ಷ ಆಯೋಜಿಸಿದ ನಾಟಕದ ಟಿಕೆಟ್ ಮಾರಾಟದಿಂದ ಸುಮಾರು ನಾಲ್ಕು ಲಕ್ಷ ರೂಪಾಯಿ ಹಾಗೂ ದಾನಿಗಳಿಂದ ಒಂದು ಲಕ್ಷ ರೂಪಾಯಿ ಸಂಗ್ರಹವಾಯಿತು. ಇಷ್ಟರಿಂದಲೇ ದೊಡ್ಡ ಪ್ರಮಾಣದಲ್ಲಿ ಮಕ್ಕಳಿಗೆ ನೋಟ್‌ಬುಕ್ ವಿತರಿಸಲು ಸಾಧ್ಯವಿಲ್ಲ' ಎನ್ನುತ್ತಾರೆ.



ಗ್ರಾಮೀಣ ಮಕ್ಕಳಿಗೆ ಅರಿವಿನ ಕಾರ್ಯಕ್ರಮ



ತಂಡದ ವತಿಯಿಂದ ನಿರ್ಮಿಸಲಾದ ಗ್ರಂಥಾಲಯ

'ನಾಟಕ ಪ್ರದರ್ಶನದಿಂದ ಸಂಗ್ರಹವಾಗುವುದು ಶೇಕಡ 7ರಷ್ಟು ಹಣವಷ್ಟೇ. ಇದರ ಜೊತೆಗೆ ಉಳಿದ ಶೇ. 93ರಷ್ಟು ಹಣವನ್ನು ತಂಡದ ಸದಸ್ಯರೇ ಹೊಂದಿಸಿಕೊಳ್ಳುತ್ತಾರೆ. 'ನನ್ನ ಶಾಲೆ ನನ್ನ ಹೆಮ್ಮೆ' ಎಂಬ ಧ್ಯೇಯದೊಂದಿಗೆ ನಾನು ನನ್ನ ಗ್ರಾಮದ ಶಾಲಾ ಮಕ್ಕಳಿಗೆ ನೋಟ್‌ಬುಕ್ ವಿತರಿಸಲು ಮುಂದಾದರೆ, ನನ್ನ ಸ್ನೇಹಿತರಿಂದ ಹಣ ಸಂಗ್ರಹಿಸಿ ಪುಸ್ತಕ ವಿತರಣೆ ಮಾಡುತ್ತೇನೆ. ಒಂದು ವೇಳೆ ಹಣ ಉಳಿದರೆ, ಆ ಹಣವನ್ನು ಬೇರೆ ಶಾಲಾ ಮಕ್ಕಳ ನೋಟ್‌ಬುಕ್ ವಿತರಣೆಗೆ ಬಳಸಿಕೊಳ್ಳಲಾಗುತ್ತದೆ. ಹೀಗೆ ನನ್ನಂತೆ ಸುಮಾರು 700ಕ್ಕೂ ಅಧಿಕ ಮಂದಿ ತಂಡದಲ್ಲಿ ಸಕ್ರಿಯವಾಗಿದ್ದು, ಅವರೆಲ್ಲರೂ ಅವರವರ ಸ್ನೇಹಿತರ ಬಳಗದಿಂದ ದೇಣಿಗೆ ಸಂಗ್ರಹಿಸಿ ಪುಸ್ತಕ ವಿತರಣೆ ಹಾಗೂ ತಂಡದ ಇನ್ನಿತರ ಸೇವಾ ಕಾರ್ಯಗಳ ನೆರವಿಗೆ ನಿಲ್ಲಲಾಗುತ್ತದೆ' ಎನ್ನುತ್ತಾರೆ.

'ಅವಿರತ'ವು ವಾರ್ಷಿಕ ಸಮಾರು 400 ಶಾಲೆಗಳ, ಅಂದಾಜು 40 ಸಾವಿರ ಮಕ್ಕಳಿಗೆ ಎರಡೂವರೆ ಲಕ್ಷ ನೋಟ್‌ಬುಕ್ಸ್ ನೀಡುತ್ತಾ ಬಂದಿದೆ. ಮಕ್ಕಳ ತರಗತಿಗಳಿಗೆ ಅನುಗುಣವಾಗಿ ನೋಟ್‌ಬುಕ್‌ಗಳು, ಲೇಖನಿ, ಪೆನ್ಸಿಲ್, ಜಾಮೆಟ್ರಿ ಸೇರಿದಂತೆ ಎಲ್ಲ ರೀತಿಯ ಸಾಮಗ್ರಿಗಳನ್ನು ಒದಗಿಸುತ್ತಿದೆ. ತರಗತಿ ಆಧರಿತವಾಗಿ ವಿದ್ಯಾರ್ಥಿಗಳಿಗೆ ಯಾವೆಲ್ಲ ಸಾಮಗ್ರಿಗಳು ಅಗತ್ಯವಿದೆ ಎಂಬುದನ್ನು ಪಟ್ಟಿ ಮಾಡಿಕೊಂಡು ಮಾನದಂಡ ರೂಪಿಸಿಕೊಂಡಿರುವ ಈ ತಂಡವು, ಅದಕ್ಕೆ ಅನುಗುಣವಾಗಿ ಸಾಮಗ್ರಿಗಳನ್ನು ಒದಗಿಸುತ್ತಿದೆ.

ವಿಜ್ಞಾನಕ್ಕೆ ಸಂಬಂಧಿಸಿದ ಸೆಮಿನಾರ್‌ಗಳನ್ನು, ಅಂಧ ಮಕ್ಕಳಿಗೆ ಅಗತ್ಯ ಪಠ್ಯ ಸಾಮಗ್ರಿಗಳನ್ನು ಉಚಿತವಾಗಿ ಪೂರೈಸುತ್ತದೆ. ಗ್ರೀನ್ ಬೋರ್ಡ್, ಅಲ್ಮೆರಾ, ನಲಿ–ಕಲಿ ಮೇಜುಗಳು ಹಾಗೂ ಕುರ್ಚಿಗಳನ್ನು ಗ್ರಾಮೀಣ ಭಾಗದ ಶಾಲೆಗಳಿಗೆ ಪೂರೈಸುತ್ತದೆ. ಜೊತೆಗೆ ಮಕ್ಕಳ ಕ್ರೀಡಾಕೌಶಲ ವೃದ್ಧಿಸಲು ಅಗತ್ಯವಾದ ಕ್ರೀಡಾ ಸಾಮಗ್ರಿಗಳನ್ನೂ ಶಾಲೆಗೆ ಒದಗಿಸುತ್ತಿದೆ.

## ಕಲೆಗೆ ನೆರವು

ಶಿಕ್ಷಣದ ಜೊತೆಗೆ ಕಲೆಗೂ ಆದ್ಯತೆ ನೀಡಲಾಗಿದೆ. ಕೆಲ ಸಿನಿಮಾಗಳು ಪ್ರತಿವರ್ಷ ರಾಷ್ಟ್ರೀಯ ಪ್ರಶಸ್ತಿ ಪಡೆಯುತ್ತವೆ. ಅಂತಹ ಸಿನಿಮಾಗಳು ರಾಜ್ಯದ ಹೆಚ್ಚಿನ ಸಂಖ್ಯೆಯ ಜನರನ್ನು ತಲುಪಿಯೇ ಇರುವುದಿಲ್ಲ. ಇದಕ್ಕೆ ಹಲವಾರು ಕಾರಣಗಳಿರಬಹುದು. ಅದೆಲ್ಲವನ್ನೂ ಬದಿಗಿಟ್ಟು ಆ ಸಿನಿಮಾಗಳ ಸಂದೇಶ ಜನರಿಗೆ ತಲುಪಬೇಕೆಂಬ ಸದುದ್ದೇಶದಿಂದ ನಾಡಿನ ಹಲವೆಡೆ ವಿಶೇಷ ಪ್ರದರ್ಶನಗಳನ್ನು ಆಯೋಜಿಸುತ್ತಾ ಬಂದಿದೆ.

ಸಿನಿಮಾಗಳೊಂದಿಗೆ ಸಂಗೀತ ಕಾರ್ಯಕ್ರಮಗಳು, ಕವಿಗಳ ಕಾವ್ಯಕಮ್ಮಟ ಕಾರ್ಯಕ್ರಮಗಳನ್ನು ಆಯೋಜಿಸುವ ಈ ತಂಡ ಆ ಮೂಲಕ ಸಂಗೀತ ಹಾಗೂ ಸಾಹಿತ್ಯ ಕ್ಷೇತ್ರಕ್ಕೂ ಕೊಡುಗೆ ನೀಡುತ್ತಿದೆ. ಸದಭಿರುಚಿಯ ನಾಟಕಗಳನ್ನೂ ಈ ತಂಡ ಪ್ರದರ್ಶಿಸುತ್ತದೆ. ಇದರ ಜೊತೆಗೆ ಸಾಂಸ್ಕೃತಿಕ ಕಾರ್ಯಕ್ರಮಗಳಿಗೂ ಆದ್ಯತೆ ನೀಡುತ್ತಿದೆ.